# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಹೆಚ್‌ಆರ್‌ಸಿ ಸಂಖ್ಯೆ: 1664/10/11/2019 c/w 6386/10/11/2016 (B-2)

3 ಮತ್ತು 4ನೇ ಮಹಡಿ, 5ನೇ ಹಂತ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 11-6-2020
ಫ್ಯಾಕ್ಸ್: 22392206
ಕಚೇರಿ ದೂ: 22392200

ಇಂದ:
ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:
ಜಿಲ್ಲಾಧಿಕಾರಿಗಳು,
ಕಲಬುರಗಿ.

ಮಾನ್ಯರೇ,

ಮೇಲ್ಕಂಡ ಪ್ರಕರಣಗಳ ಬಗ್ಗೆ ದಿನಾಂಕ 11-6-2020 ರಂದು ಆಯೋಗವು ಈ ಕೆಳಗಿನಂತೆ ಆದೇಶ ಮಾಡಲಾಗಿದೆ. ಆದೇಶವು ಸ್ವಯಂವೇದ್ಯವಾಗಿದೆ.

## ಆದೇಶ

ಶ್ರೀಮತಿ ಭಾಗ್ಯಲಕ್ಷ್ಮಿ ಕೋಂ ಮೋಹನ್‌ಕುಮಾರ್ ಇವರು ಆಯೋಗಕ್ಕೆ ಸಲ್ಲಿಸಿದ ದೂರಿನಲ್ಲಿ, ತನ್ನ ಮನೆಯ ಹತ್ತಿರ ಮಾಂಸವನ್ನು ಮಾರುತ್ತಿದ್ದು ಅದರಿಂದಾಗಿ ವಾಯು ಮಾಲಿನ್ಯವಾಗುತ್ತಿದ್ದು ಈ ಬಗ್ಗೆ ಸೇಡಂ ನಗರಸಭೆ ಮುಖ್ಯಾಧಿಕಾರಿಗಳಿಗೆ ಹಾಗೂ ಸಹಾಯಕ ಆಯುಕ್ತರು, ಸೇಡಂ ಇವರಿಗೆ ದೂರು ಸಲ್ಲಿಸಿದರೂ ಅವರು ಯಾವುದೇ ಕ್ರಮ ಕೈಗೊಳ್ಳದ ಬಗ್ಗೆ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಿರುತ್ತಾರೆ. ಆಯೋಗವು ದೂರರ್ಜಿಯ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ ಇವರಿಗೆ ಆದೇಶಿಸಿದ್ದು, ಅದರಂತೆ, ಸದರಿಯವರ ಪತ್ರ ಸಂಖ್ಯೆ: ಕಂ/ಡಿಸಿಕೆ/ಎಂಎಜಿ/ಹೆಚ್‌ಆರ್‌ಸಿ/48/2019-20/4151, ದಿನಾಂಕ: 22-8-2019ರ ಪತ್ರದಲ್ಲಿ ವರದಿಯನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ.

ಮುಖ್ಯಾಧಿಕಾರಿಗಳು, ಪುರಸಭೆ, ಸೇಡಂ ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಇವರು ವರದಿಯಲ್ಲಿ, ಸೇಡಂ ಪಟ್ಟನದ ದೊಡ್ಡ ಅಗಸಿ ಬಡಾವಣೆಯಲ್ಲಿರುವ ಕಸಾಯಿ ಖಾನೆಯನ್ನು ಸ್ಥಳಾಂತರಿಸಿ ಹೊಸದಾಗಿ ಸೇಡಂ ಪಟ್ಟಣದ ಸರ್ವೆ ನಂ.405ರಲ್ಲಿ 12-05 ಜಮೀನಿನ ಪೈಕಿ 2-00 ಎಕರೆ ಕಸಾಯಿ ಖಾನೆ ನಿರ್ಮಾಣಕ್ಕಾಗಿ ಸರಕಾರಕ್ಕೆ ದಿನಾಂಕ 15-11-2018ರಂದು ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದೂ, ಈ ಕಸಾಯಿ ಖಾನೆಯಲ್ಲಿ ಸ್ವಚ್ಛತೆ ಹಾಗೂ ಶುಚಿತ್ವವನ್ನು ಕಾಪಾಡಿಕೊಂಡು ಹೋಗುವುದಾಗಿ ಮುಖ್ಯಾಧಿಕಾರಿಗಳು ವರದಿಯಲ್ಲಿ ತಿಳಿಸಿರುತ್ತಾರೆ.

ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿ ಅವರ ಅಭಿಪ್ರಾಯ/ಆಕ್ಷೇಪಣೆ ಕೋರಿದ್ದು, ದೂರುದಾರರು ದಿನಾಂಕ 24-10-2019ರಂದು ಜೀಮೇಲ್ ಮೂಲಕ ವರದಿ ಮೇಲೆ ಅವರ ಅಭಿಪ್ರಾಯ/ಆಕ್ಷೇಪಣೆ ಸಲ್ಲಿಸಿದ್ದು ಆಕ್ಷೇಪಣೆಯಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಇದೂವರೆವಿಗೂ ಕಸಾಯಿ ಖಾನೆಯನ್ನು ಸ್ಥಳಾಂತರಿಸಲು ಕ್ರಮ ಕೈಗೊಂಡಿಲ್ಲವೆಂದೂ ಹಾಗೂ ಹಾಲಿ ಕಸಾಯಿ ಖಾನೆಯಲ್ಲಿ ಸ್ವಚ್ಛತೆ ಕ್ರಮ

ಕೈಗೊಂಡಿರುವುದಿಲ್ಲವೆಂದೂ, ಆದುದರಿಂದ ಸೂಕ್ತ ಕ್ರಮ ಕೈಗೊಳ್ಳಲು ಆಯೋಗವನ್ನು ಕೋರಿರುತ್ತಾರೆ.

ಮುಖ್ಯಾಧಿಕಾರಿಗಳು, ಪುರ ಸಭೆ, ಸೇಡಂ ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ ಇವರ ವರದಿಯನ್ನು ಹಾಗೂ ಸಂಬಂಧಿಸಿದ ಪೂರಕ ದಾಖಲೆಗಳನ್ನು ಮತ್ತು ದೂರುದಾರರ ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಶೀಲಿಸಿದ ಆಯೋಗವು, ಪ್ರಕರಣದ ವಿಷಯಕ್ಕೆ ಸಂಬಂಧಪಟ್ಟಂತೆ, ದೂರುದಾರರಾದ ಶ್ರೀಮತಿ ಭಾಗ್ಯಲಕ್ಷ್ಮಿ ಮೋಹನ್‌ಕುಮಾರ್ ಕಟ್ಟಿಮನಿ ಇವರ ದಿನಾಂಕ 24-10-2019ರಂದು ಸಲ್ಲಿಸಿರುವ ಅಭಿಪ್ರಾಯ/ಆಕ್ಷೇಪಣೆಯನ್ನು ಜಿಲ್ಲಾಧಿಕಾರಿಗಳು, ಕಲಬುರಗಿ ಇವರಿಗೆ ಕಳುಹಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿ, ಕ್ರಮ ಕೈಗೊಂಡ ವರದಿಯನ್ನು 8 ವಾರಗಳಲ್ಲಿ ಆಯೋಗಕ್ಕೆ ಸಲ್ಲಿಸಲು ಸೂಚಿಸಿ, ಸದರಿಯವರ ವರದಿಯನ್ನು ಅಂಗೀಕರಿಸಿ, ಪ್ರಕರಣಗಳನ್ನು ತಾತ್ಕಾಲಿಕವಾಗಿ ಮುಕ್ತಾಯಗೊಳಿಸಿದೆ.

ಸಹಿ/-
(ಕೆ.ಬಿ.ಚಂಗಪ್ಪ)
ಸದಸ್ಯರು

ಇದು ತಮ್ಮ ಮಾಹಿತಿಗಾಗಿ.

ತಮ್ಮ ವಿಶ್ವಾಸಿ,

ಸಹಾಯಕ ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಪ್ರತಿಯನ್ನು: ಶ್ರೀಮತಿ ಭಾಗ್ಯಲಕ್ಷ್ಮೀ ಕೋಂ ಮೋಹನ್‌ಕುಮಾರ್. ಸಿ ಕಟ್ಟಿಮನಿ. ಮನೆ ನಂ.1-7-56. ದೊಡ್ಡ ಅಗಸಿ. ಸೇಡಂ. ಕಲಬುರಗಿ ಜಿಲ್ಲೆ - ಇವರಿಗೆ ಮಾಹಿತಿಗಾಗಿ.

ಎಸ್ಸಾರೆಸ್